# ಕೊಲ್ಲಿಯಲ್ಲಿ ಕೆಲವು ದಿನ..

■ ಚಿತ್ರ– ಬರಹ: **ವಸಂತ ಹೊಸಬೆಟ್ಟು**

**ಓ**ಮನ್ ನಲ್ಲಿ ನೆಲೆಸಿರುವ ಎಲ್ಲರದ್ದೂ ಒಂದು ಕಣ್ಣು ಊರಿನ ಮೇಲೆಯೇ. ಇಲ್ಲಿನ ಭಾರತೀಯರು, ಕನ್ನಡಿಗರು ಎಲ್ಲರದ್ದೂ ಒಂದೇ ಧ್ವನಿ. ಆದಷ್ಟು ದುಡಿದು ಇಲ್ಲಿ ದುಡ್ಡು ಗಳಿಸಬೇಕು; ಊರಲ್ಲಿ ಹೂಡಿಕೆ ಮಾಡಬೇಕು. ಏಕೆಂದರೆ ಈ ದೇಶಕ್ಕೆ ಬೇಕಾಗಿರುವುದು ನಿಮ್ಮ ಶ್ರಮ ಮತ್ತು ವೃತ್ತಿನೈಪುಣ್ಯ.

ನಾಲ್ಕು ತಲೆಮಾರಿನಿಂದ ಓಮನ್‌ನಲ್ಲೇ ನೆಲೆಸಿರುವ 'ಹರಿದಾಸ್ ಸನ್ಸ್' ಅಂಗಡಿಯ ಮಾಲೀಕ ಗುಜರಾತಿ ವ್ಯಾಪಾರಿ ಮಹೇಶ್ ಹರಿದಾಸ್‌ರ ಒಂದು ಕಣ್ಣು ಸದಾ ಬೆಂಗಳೂರಿನ ದೇವನಹಳ್ಳಿಯಲ್ಲಿ ತಾನು ಕೊಂಡಿರುವ ಜಮೀನು ಕಡೆಗೆ! ಏಕೆಂದರೆ ಅವರಿಗೆ ಇಲ್ಲಿ ಪೌರತ್ವವೂ ಸಿಕ್ಕಿಲ್ಲ, ಯಾವುದೇ ಹೂಡಿಕೆಗೆ ಸುಲಭ ಆಯ್ಕೆ ಇಲ್ಲ.

ಆದರೆ ಇಲ್ಲಿ ಯಾವುದೇ ಭಾಷೆ, ಧರ್ಮವನ್ನು ಯಾರೂ ಹೇರುವುದಿಲ್ಲ. ಅವರವರ ದೇಶದ ಶಿಕ್ಷಣ ವ್ಯವಸ್ಥೆಯೂ ಇದೆ. ರಸ್ತೆ ಟೋಲ್ ಬಿಡಿ, ಯಾವುದೇ ತೆರಿಗೆಯೂ ಇಲ್ಲ! 'ಮಗಳು ಕನ್ನಡದಲ್ಲಿ 50ಕ್ಕೆ 47 ಅಂಕ' ಎಂದು ಹೆಮ್ಮೆ ಪಡುವ ಗುರುದಾಸ್ ಪೆಜತ್ತಾಯರಂತವರು ಕೂಡಾ ಮಸ್ಕತ್ತಿನಲ್ಲಿ ಸಿಗುತ್ತಾರೆ. ಓಮನ್ ಸರಕಾರ ತನ್ನ ತೈಲ ಆದಾಯದಿಂದ ಇಲ್ಲಿರುವ ಜನರಿಗೆ ಎಲ್ಲ ಸವಲತ್ತುಗಳನ್ನೂ ಕಲ್ಪಿಸಿ ಕೊಟ್ಟಿದೆ. 'ಸುಧಾ' ಸಹಿತ ಕನ್ನಡದ ಎಲ್ಲಾ ನಿಯತಕಾಲಿಕಗಳು, ಇತರ ಪರಿಕರಗಳು ಇಲ್ಲಿ ಸಿಗುತ್ತವೆ.

ನಾನು ಹೋದದ್ದು ರಂಜಾನ್ ತಿಂಗಳಲ್ಲಿ. ಉಪವಾಸದ ಸಮಯದಲ್ಲಿ ಯಾರೂ ಸಾರ್ವಜನಿಕ ಸ್ಥಳಗಳಲ್ಲಿ ತಿನ್ನಲು ಅವಕಾಶವಿಲ್ಲ. ದುಬೈಯಲ್ಲಾದರೆ ಮುಸ್ಲಿಮೇತರರಿಗೆಂದೇ, ಕಪ್ಪು ಪರದೆ ಹಾಕಲಾದ ವಿಶೇಷ ಪರವಾನಿಗೆ ಪಡೆದ ಉಪಾಹಾರ ಗೃಹಗಳಿವೆ.

ಯಾವ ದೇಶದವರೂ ಇಲ್ಲಿ ಬಂದು ನಿಶ್ಚಿಂತೆಯಿಂದ ದುಡಿಯಬಹುದು. ನಾವು ದುಬೈಯಲ್ಲಿ ಹೋದ ಕ್ರೂಸ್‌ನಲ್ಲಿ ಭಾರತೀಯನೊಬ್ಬ ಕ್ಯಾಪ್ಟನ್ ಆಗಿದ್ದರೆ, ಸಹ ಕ್ಯಾಪ್ಟನ್ ಪಾಕಿಸ್ತಾನದವನು. ದುಬೈ ಫ್ರೇಮ್‌ನಲ್ಲಿ ಸಿಕ್ಕಿದ ಸಿರಿಯಾದ ಗೈಡ್‌ಗೆ ಜೊತೆಗಾತಿ ಉಕ್ರೇನ್‌ನವಳು. ಫಿಲಿಪ್ಪೀನ್ಸ್ ದೇಶದ ಸೇಲ್ಸ್ ಹುಡುಗಿಗೆ ನೈಜೀರಿಯಾದ ಹುಡುಗ ಜೊತೆಗಾರನಾಗಿದ್ದ.

ನಮ್ಮ ಭಾರತದಲ್ಲಿ ಒಟ್ಟಾಗಿ ಕಾಣದ ಶಿವ– ಬ್ರಹ್ಮ, ನಾರಾಯಣ ಗುರು, ಗುಜರಾತಿ, ರಾಜಸ್ಥಾನದ ದೇವರೆಲ್ಲಾ ಒಂದೇ ಸೂರಿನ ಮಸ್ಕತ್ ದೇವಸ್ಥಾನದಲ್ಲಿ ಕಂಡರು. ಮಸ್ಕತ್ ನ ಪಂಜಾಬ್ ದಾಭಾದಲ್ಲಿ ಭಾರತದ ಲಾರಿಯನ್ನೇ ಆಕರ್ಷಣೆಗಾಗಿ ಇಟ್ಟಿದ್ದಾರೆ.

ಎಲ್ಲವೂ ಸ್ವಚ್ಛ. ಪವರ್ ಕಟ್ ಇಲ್ಲ. ರಸ್ತೆಯಲ್ಲಿ ಗುಂಡಿ ಇಲ್ಲ. ಸಮುದ್ರದ ನೀರಿನಿಂದ ಸಿಹಿ ನೀರು ಸಂಸ್ಕರಿಸಿ ಕೊಡುತ್ತಾರೆ. ನಾನು ಅಲ್ಲಿದ್ದ ಹನ್ನೊಂದು ದಿನಗಳಲ್ಲಿ ದುಬೈಯ ವಿಮಾನ ನಿಲ್ದಾಣದ ಬಳಿ ಮಾತ್ರ ಒಮ್ಮೆ ವಾಹನದ ಹಾರ್ನ್ ಕೇಳಿಸಿತು ಅಷ್ಟೆ! ಅಪಘಾತವಂತೂ ಕಾಣಲೇ ಇಲ್ಲ.

ಓಮನ್‌ನ ರಾಜ ಭಾರತದ ಪುಣೆಯಲ್ಲಿ ಕಲಿತು, ನಮ್ಮ ಹಿಂದಿನ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮರ ಶಿಷ್ಯರಾಗಿದ್ದರು. ಇಲ್ಲಿ ಓಮಾನಿಯರು ಶೇಕಡಾ 55ರಷ್ಟಿದ್ದರೆ, ಇತರ ದೇಶೀಯರು ಶೇಕಡಾ 45ರಷ್ಟಿದ್ದಾರೆ. ಸೆಕ್ಯೂರಿಟಿ, ಕಾರಿನ ಡ್ರೈವರ್ ಮುಂತಾದ ಹಲವು ಕೆಲಸಗಳು ಓಮಾನಿಗಳಿಗೆ ಮೀಸಲು. ಮನೆಗಳಿಗೆ, ಕಚೇರಿಗೆ ಓಮಾನ್ ಅಂಚೆಯಣ್ಣ ಬರುವುದಿಲ್ಲ. ನೀವೇ ಪೋಸ್ಟ್ ಬಾಕ್ಸ್ ನಂಬರ್ ಪಡೆದು ಅಂಚೆ ಕಚೇರಿಗೆ ಹೋಗಿ ವ್ಯವಹಾರ ನಡೆಸಬಹುದು. ಪ್ರತಿದಿನವೂ ಓಮನ್‌ಗೆ ಹಾಲು, ಮೊಸರು ಪಕ್ಕದ ಸೌದಿ ಅರೇಬಿಯಾದಿಂದಲೇ ಬರಬೇಕು.

ಯುಎಇ ರಾಜಧಾನಿ ಅಬುದಾಭಿ ಅತ್ಯಂತ ಸುಂದರ ನಗರ. ಇಲ್ಲಿಗೆ ಸಮೀಪದಲ್ಲಿರುವ ಕಾರ್ ಮ್ಯೂಸಿಯಂನಲ್ಲಿ ಜಗತ್ತಿನ ಸುಮಾರು 238 ನಮೂನೆಯ ವಾಹನಗಳ ಪ್ರದರ್ಶನ ನೋಡಿದೆ. 'ನಮ್ಮ ಅಂಬಾಸಡರ್ ಇಲ್ಲವಲ್ಲ..?' ಎಂದು ಪ್ರಶ್ನಿಸಿದಾಗ, ಅಲ್ಲಿನ ಗೈಡ್ ಕೇರಳ ಮೂಲದ ಜಯಪ್ರಕಾಶ್, 'ಹೌದಲ್ಲ!' ಎಂದರು.

ಓಮನ್‌ನ ಬಹುತೇಕ ಕಟ್ಟಡಗಳು ಬಿಳಿ ಬಣ್ಣದ್ದು, ಆದರೆ ಯುಎಇ ದೇಶಗಳಲ್ಲಿ ನಸು ಕಂದು ಬಣ್ಣದ್ದು. ಯುಎಇ ಯ ಹಲವೆಡೆ ಅಂಗಡಿಗಳಲ್ಲಿ 'ಶೇಕಡಾ 5% ವ್ಯಾಟ್ ಇದೆ' ಎಂಬ ಬೋರ್ಡ್ ಕಾಣಿಸುತ್ತಿದೆ. ದುಬೈಯ ಕೇರಳ, ಕೊಡಗು ಮೂಲದ ಎರಡು ಚಿನ್ನಾಭರಣ ಮಳಿಗೆಗಳಲ್ಲಿ ಖರೀದಿ ಮಾಡಿದ ಬಳಿಕ ರಸೀತಿ ಕೊಡಲಿಲ್ಲ! ಅಂದರೆ ಸರ್ಕಾರಕ್ಕೆ 5% ವ್ಯಾಟ್ ಖೋತಾ?

ಫ್ಲ್ಯಾಟ್‌ಗಳಲ್ಲಿ ಹೊರಗೆ ಕಾಣುವಂತೆ ಬಟ್ಟೆ ಒಣಗಿಸಿದರೆ ದುಬೈಯಲ್ಲಿ ಪೊಲೀಸ್ ರೈಡ್ ನಡೆಯುತ್ತದೆ! ಆದರೆ ನಾವು ಬರ್‌ದುಬೈನಲ್ಲಿ ಓಡಾಡುತ್ತಿದ್ದಾಗ ನಾಲ್ಕನೇ ಮಹಡಿಯಲ್ಲಿ ಬಟ್ಟೆ ಒಣಹಾಕಿದ್ದು ಕಂಡು ಬಂತು. ಈ ಪ್ರದೇಶದಲ್ಲಿ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ!




ರಂಜಾನ್ ತಿಂಗಳಲ್ಲಿ ಆಹಾರ




ಓಮನ್‌ನಲ್ಲಿ ಸುಧಾ ವಾರಪತ್ರಿಕೆ




ಮಸ್ಕತ್‌ನಲ್ಲಿ ಪಂಜಾಬಿ ದಾಭಾ